ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಿಗೆ ಅಪೆರೆಲ್ ಪಾರ್ಕ್‌ಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ; ಅವುಗಳ ವಿವರಗಳೇನು;

ಆ) ವಿಶೇಷತಃ ಮಹಿಳೆಯರಿಗೆ ಉದ್ಯೋಗ ನೀಡುವ ಅಪೆರೆಲ್ ಪಾರ್ಕ್‌ಗಳನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸ್ಥಾಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಹೆಚ್. ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರಾಜ್ಯದ ಎರಡು ಜಿಲ್ಲೆಗಳಲ್ಲಿ ಅಂತಹ ಪಾರ್ಕ್‌ಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಅವುಗಳೆಂದರೆ: 1) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ. 2) ಬಳ್ಳಾರಿ ಕೈಗಾರಿಕಾ ಪ್ರದೇಶ, ಮುಂಡರಗಿ. ದೊಡ್ಡಬಳ್ಳಾಪುರದಲ್ಲಿ ಅಪೆರೆಲ್ ಪಾರ್ಕ್ ಸ್ಥಾಪಿಸಲು ಕೇಂದ್ರಸರ್ಕಾರ ಅನುಮೋದನೆ ನೀಡಿರುತ್ತದೆ.

ಆ) ಅಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ರಾಜ್ಯದಲ್ಲಿ ತೆಂಗಿನ ನಾರಿನ ಕಾರ್ಖಾನೆಗಳು ದುಸ್ಥಿತಿಯಲ್ಲಿರುವುದು

3673(3686) ಶ್ರೀ ಎಸ್. ಎ. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ತೆಂಗಿನ ನಾರಿನ ಕಾರ್ಖಾನೆಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು);

ಆ) ಈ ಕಾರ್ಖಾನೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಮುಚ್ಚಲಾದ ಕಾರ್ಖಾನೆಗಳ ಸಂಖ್ಯೆ ಎಷ್ಟು; ಕಾರ್ಖಾನೆಗಳನ್ನು ಮುಚ್ಚಲು ಕಾರಣಗಳೇನು;

ಇ) ಉಳಿದಿರುವ ಕಾರ್ಖಾನೆಗಳು ತೀವ್ರ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕಾರ್ಖಾನೆಗಳ ಸಂಕಷ್ಟಕ್ಕೆ ಕಾರಣಗಳೇನು;

ಈ) ಸಂಕಷ್ಟದಲ್ಲಿರುವ ಕಾರ್ಖಾನೆಗಳು ಪುನಃಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ತೆಂಗಿನ ನಾರಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 149 ತೆಂಗಿನ ನಾರಿನ ಘಟಕಗಳಿದ್ದು, ಜಿಲ್ಲಾವಾರು ವಿವರ ಈ ಕೆಳಗಿನಂತಿದೆ:

1. ಬೆಂಗಳೂರು(ಗ್ರಾಮಾಂತರ)	23
2. ಚಿತ್ರದುರ್ಗ	18
3. ಚಿಕ್ಕಮಗಳೂರು	03
4. ಚಾಮರಾಜನಗರ	02
5. ದಾವಣಗೆರೆ	01
6. ಹಾಸನ	33
7. ಕಾರವಾರ(ಉತ್ತರಕನ್ನಡ)	12
8. ಮಂಡ್ಯ	07
9. ತುಮಕೂರು	47
10. ಉಡುಪಿ	03
ಒಟ್ಟು	**149**

ಆ) ಯಾವುದು ಇಲ್ಲ
ಉದ್ಭವಿಸುವುದಿಲ್ಲ

ಇ) ಇಲ್ಲ
ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) 1899

ಕಮಲಪುರ್ ತಾಲ್ಲೂಕಿನಲ್ಲಿ ಪಶುವೈದ್ಯ ಶಾಲೆಗಳು ಹಾಗೂ ಸಿಬ್ಬಂದಿಗಳ ಕೊರತೆ

3674(4163) ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆ, ಕಮಲಾಪುರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಪಶುವೈದ್ಯರ ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಕೊರತೆ ಇರುವ ಸಂಖ್ಯೆ ಎಷ್ಟು; ಇವುಗಳನ್ನು ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು;

ಇ) ಈ ಕ್ಷೇತ್ರಕ್ಕೆ ಹಾಲಿ ಎಷ್ಟು ಘಟಕಗಳ ಕೊರತೆ ಇದೆ; ಈ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶುಗಳ ಸಂಖ್ಯೆ ಎಷ್ಟು; ಅವುಗಳ ಅನುಗುಣವಾಗಿ ಪಶು ಆಸ್ಪತ್ರೆಗಳು ಇವೆಯೆ;

ಈ) ಇಲ್ಲದಿದ್ದಲ್ಲಿ, ಎಲ್ಲೆಲ್ಲಿ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ; (ವಿವರ ನೀಡುವುದು);

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಒಟ್ಟು 20 ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿರುತ್ತವೆ.

ಪಶು ಆಸ್ಪತ್ರೆ	1
ಪಶುಚಿಕಿತ್ಸಾಲಯ	4
ಪ್ರಾಥಮಿಕ ಪಶುಚಿಕಿತ್ಸಾಲಯ	10
ಕೃತಕ ಗರ್ಭಧಾರಣಾ ಕೇಂದ್ರ	5

ಆ) **ಒಟ್ಟು ಹುದ್ದೆಗಳ ಸಂಖ್ಯೆ** **65**

ಸಹಾಯಕ ನಿರ್ದೇಶಕರು	1
ಪಶುವೈದ್ಯಾಧಿಕಾರಿಗಳು	4
ಇತರೆ	60
ಖಾಲಿ ಇರುವ ಹುದ್ದೆಗಳ ಸಂಖ್ಯೆ	**14**
ಪಶುವೈದ್ಯಾಧಿಕಾರಿ	3
'ಡಿ' ದರ್ಜೆ	11

ಖಾಲಿ ಇರುವ 11 ಡಿ ದರ್ಜೆ ಹುದ್ದೆಗಳನ್ನು ಜಿಲ್ಲಾಧಿಕಾರಿಗಳು ವಿನ್ಯಾಸ ಮಾಡಿ ಸಕ್ರಮಗೊಳಿಸಿದ ನೌಕರರಿಂದ ಭರ್ತಿ ಮಾಡಲು ಕ್ರಮ ಜರುಗಿಸಲಾಗಿದೆ.

250 ಪಶುವೈದ್ಯಾಧಿಕಾರಿ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.